# All India Radio: Bangalore
# National Bulletin In Kannada
**06.02.2025  07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**06.02.2025  07.35 a.m.**

**<><><><>**

**ಮುಖ್ಯಾಂಶಗಳು**

1. **ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಈಶಾನ್ಯ ಪ್ರದೇಶ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆ - ಕೇಂದ್ರ ಸಚಿವ ಅಮಿತ್ ಶಾ**
2. **ದೆಹಲಿಯಲ್ಲಿ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹಾಗೂ ಎಸ್‌ಸಿಬ ಪ್ರಧಾನ ಕಾರ್ಯದರ್ಶಿ ನುರ್ಲಾನ್ ಭೇಟಿ**
3. **ಮಹಾಕುಂಭಮೇಳದಲ್ಲಿಂದು ಜನಜಾತಿ ಸಾಂಸ್ಕೃತಿಕ ಸಮಾಗಮ ; ಬುಡಕಟ್ಟು ಜನಾಂಗದ ೧೫ ಸಾವಿರಕ್ಕೂ ಅಧಿಕ ಮಂದಿ ಭಾಗಿ**
4. **ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್ ಸರಣಿ ; ಮೊದಲನೇ ಪಂದ್ಯದಲ್ಲಿಂದು ಭಾರತ-ಇಂಗ್ಲೆಂಡ್ ಮುಖಾಮುಖಿ**

<><><><>

**ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಇಡೀ ಈಶಾನ್ಯ ಪ್ರದೇಶ ಈಗ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ನಿನ್ನೆ ವಿಡಿಯೋ ಕಾನ್ಫರೆನ್ಸ್ ಮೂಲಕ ತ್ರಿಪುರ ಸರ್ಕಾರದಲ್ಲಿ ೨ ಸಾವಿರದ ೮೦೦ಕ್ಕೂ ಹೆಚ್ಚು ನೇಮಕಾತಿ ಪತ್ರಗಳ ವಿತರಣಾ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ತ್ರಿಪುರ ಸರ್ಕಾರ ಯಾವುದೇ ತಾರತಮ್ಯ, ಶಿಫಾರಸ್ಸು ಅಥವಾ ಭ್ರಷ್ಟಾಚಾರವಿಲ್ಲದೇ ಪಾರದರ್ಶಕವಾಗಿ ಉದ್ಯೋಗ ಒದಗಿಸುತ್ತಿದೆ. ಕಳೆದ ೧೦ ವರ್ಷಗಳಲ್ಲಿ ರಾಜ್ಯದಲ್ಲಿ ಶಾಂತಿ ಸ್ಥಾಪಿಸಲು ೩ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಅಲ್ಲಿನ ಬ್ರೂರಿಯಾಂಗ್ ಜನರಿಗೆ ಶಾಶ್ವತ ನಿವಾಸ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸುವ ಮೂಲಕ ಅವರ ಜೀವನದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತತ್ವದ ಸರ್ಕಾರ ಸಕರಾತ್ಮಕ ಬದಲಾವಣೆ ತಂದಿದೆ ಎಂದು ಅಮಿತ್ ಶಾ ಹೇಳಿದ್ದಾರೆ.**

**ಧ್ವನಿ : ಅಮಿತ್ ಶಾ (೩೪ ಸೆಕೆಂಡ್ಸ್)**

<><><><>

ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ದೆಹಲಿಯಲ್ಲಿ ನಿನ್ನೆ ಶಾಂಘೈ ಸಹಕಾರ ಒಕ್ಕೂಟ- ಎಸ್‌ಸಿಒದ ಪ್ರಧಾನ ಕಾರ್ಯದರ್ಶಿ ನುರ್ಲಾನ್ ಯರ್ಮೆಕ್ ಬಯೇವ್ ಅವರನ್ನು ಭೇಟಿಯಾದರು. ಪ್ರಧಾನ ಕಾರ್ಯದರ್ಶಿಯ ಜವಾಬ್ದಾರಿ ವಹಿಸಿಕೊಂಡಿದ್ದಕ್ಕಾಗಿ ಡಾ. ಜೈಶಂಕರ್ ನುರ್ಲಾನ್ ಅವರನ್ನು ಅಭಿನಂದಿಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ವೊಂದರಲ್ಲಿ ಅವರು, ಎಸ್‌ಸಿಒ ದಲ್ಲಿ ಭಾರತದ ಪಾತ್ರ ಮತ್ತು ಸುರಕ್ಷಿತ ಎಸ್‌ಸಿಒ ದ ನಿರ್ವಹಣದ ಬಗ್ಗೆ ಚರ್ಚಿಸಲಾಗಿದೆ ಎಂದಿದ್ದಾರೆ. ಇದರ ನಡುವೆ ನಿನ್ನೆ ಡಾ. ಜೈಶಂಕರ್ ಈಜಿಪ್ಟ್‌ನ ವಿದೇಶಾಂಗ ಸಚಿವ ಡಾ. ಬದರ್ ಅಬ್ದೆಲಟ್ಟಿ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಈ ವೇಳೆ ಇತ್ತೀಚಿನ ಬೆಳವಣಿಗೆಗಳು ಮತ್ತು ಭಾರತ-ಈಜಿಪ್ಟ್ ನಡುವಿನ ದ್ವಿಪಕ್ಷೀಯ ಸಂಬಂಧಗಳು ಕುರಿತು ಚರ್ಚಿಸಲಾಗಿದೆ.

<><><><>

೭೦ ಸದಸ್ಯ ಬಲದ ದೆಹಲಿ ವಿಧಾನಸಭೆಗೆ ನಿನ್ನೆ ನಡೆದ ಚುನಾವಣೆ ಬಹುತೇಕ ಶಾಂತಿಯುತವಾಗಿ ಮುಕ್ತಾಯಗೊಂಡಿದ್ದು, ಶೇಕಡ ೬೦.೪೨ ರಷ್ಟು ಮತದಾನ ದಾಖಲಾಗಿದೆ. ಈಶಾನ್ಯ ದೆಹಲಿ ಜಿಲ್ಲೆಯಲ್ಲಿ ಅತಿ ಹೆಚ್ಚು ಶೇಕಡ ೬೬.೨೫ ರಷ್ಟು ಮತದಾನವಾದರೆ, ಆಗ್ನೇಯ ದೆಹಲಿಯಲ್ಲಿ ಶೇಕಡ ೫೬.೧೬ ರಷ್ಟು ಮತದಾನ ದಾಖಲಾಗಿದೆ. ಶಹದಾರ ಜಿಲ್ಲೆಯಲ್ಲಿ ಶೇಕಡ ೬೩.೯೪, ಉತ್ತರ ದೆಹಲಿಯಲ್ಲಿ ೫೯.೫೫ ಹಾಗೂ ವಾಯುವ್ಯ ದೆಹಲಿಯಲ್ಲಿ ಶೇಕಡ ೬೦.೭೦ ರಷ್ಟು ಮತದಾನವಾಗಿದೆ. ಆಮ್ ಆದ್ಮಿ ಪಕ್ಷದ ಅರವಿಂದ್ ಕೇಜ್ರಿವಾಲ್, ಆಪ್ ನಾಯಕರಾದ, ಮುಖ್ಯಮಂತ್ರಿ ಅತಿಶಿ, ಮನೀಶ್ ಸಿಸೋಡಿಯಾ ಮತ್ತು ಬಿಜೆಪಿಯ ಪರ್ವೇಶ್ ವರ್ಮಾ, ವಿಜೇಂದರ್ ಗುಪ್ತಾ, ಅರವಿಂದರ್ ಸಿಂಗ್ ಲವ್ಲಿ ಮತ್ತು ರಮೇಶ್ ಬಿಧುರಿ, ಕಾಂಗ್ರೆಸ್‌ನ ದೇವೇಂದ್ರ ಯಾದವ್, ಸಂದೀಪ್ ದೀಕ್ಷಿತ್ ಮತ್ತು ಅಲ್ಕಾ ಲಂಬಾ ಹಾಗೂ ಇನ್ನಿತರ ಪ್ರಮುಖರು ಸೇರಿದಂತೆ ಒಟ್ಟು ೬೯೯ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ವಿದ್ಯುನ್ಮಾನ ಮತಯಂತ್ರಗಳಲ್ಲಿ ಅಡಕವಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಆಯೋಗ ವ್ಯಾಪಕ ಭದ್ರತಾ ವ್ಯವಸ್ಥೆಗಳನ್ನು ಮಾಡಿತ್ತು. ಮತ ಎಣಿಕೆ ಇದೇ ೮ ರಂದು ನಡೆಯಲಿದೆ. ತಮಿಳುನಾಡಿನ ಈರೋಡ್-ಪೂರ್ವ ವಿಧಾನಸಭಾ ಕ್ಷೇತ್ರ ಮತ್ತು ಉತ್ತರ ಪ್ರದೇಶದ ಮಿಲ್ಕಿಪುರ ವಿಧಾನಸಭಾ ಕ್ಷೇತ್ರದಲ್ಲಿ ನಿನ್ನೆ

ಉಪಚುನಾವಣೆ ನಡೆದಿದ್ದು, ಈರೋಡ್-ಪೂರ್ವದಲ್ಲಿ ಸುಮಾರು ಶೇಕಡ ೬೭.೯೭ ರಷ್ಟು ಮತ್ತು ಮಿಲ್ಕಿಪುರದಲ್ಲಿ ಸುಮಾರು ಶೇಕಡ ೬೫.೩೫ ರಷ್ಟು ಮತದಾನ ದಾಖಲಾಗಿದೆ.

<><><><>

ಈ ಬಾರಿಯ ಬಜೆಟ್‌ನಲ್ಲಿ ದೇಶದ ಪ್ರಮುಖ ನಗರಗಳ ನಡುವೆ ೫೦ ನಮೋ ಭಾರತ್ ರೈಲುಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು, ಕರ್ನಾಟಕಕ್ಕೂ ೨ ರೈಲುಗಳ ಕೊಡುಗೆ ನೀಡಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಹುಬ್ಬಳ್ಳಿ-ದಾವಣಗೆರೆ ಮತ್ತು ಬೆಂಗಳೂರು-ಮೈಸೂರು ನಡುವೆ ೨ ನಮೋ ಭಾರತ್ ರೈಲುಗಳು ಪ್ರಸಕ್ತ ವರ್ಷದಿಂದಲೇ ಸಂಚರಿಸಲಿವೆ.

<><><><>

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿಂದು ಜನಜಾತಿ ಸಾಂಸ್ಕೃತಿಕ ಸಮಾಗಮ- ೨೦೨೫ ನಡೆಯಲಿದೆ. ದೇಶದ ವಿವಿಧ ಪ್ರದೇಶಗಳ ಬುಡಕಟ್ಟು ಜನಾಂಗದ ೧೫ ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ. ಆರು ದಿನಗಳ ಈ ಕಾರ್ಯಕ್ರಮದಲ್ಲಿ, ಬುಡಕಟ್ಟು ಜನಾಂಗದ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವ ಪ್ರತಿಜ್ಞೆ ಕೈಗೊಳ್ಳಲಾಗುವುದು ಎಂದು ನಮ್ಮ ಭಾತ್ಮೀದಾರರು ವರದಿ ಮಾಡಿದ್ದಾರೆ.

ಬಿರ್ಸಾ ಮುಂಡಾ ಅವರ ೧೫೦ ನೇ ಜನ್ಮ ದಿನಾಚರಣೆಯ ಸ್ಮರಣಾರ್ಥ, ೨೦೨೫ ನೇ ವರ್ಷವನ್ನು ಜನಜಾತಿ ಗೌರವ ವರ್ಷ ಎಂದು ಘೋಷಿಸಲಾಗಿದೆ. ಕೇಂದ್ರ ಬುಡಕಟ್ಟು ವ್ಯವಹಾರಗಳ ರಾಜ್ಯ ಸಚಿವ ದುರ್ಗಾದಾಸ್ ಉಯಿಕೆ ಈ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಯುವ ಕುಂಭದಲ್ಲಿ ೮ ಸಾವರಕ್ಕೂ ಹೆಚ್ಚು ಯುವಕರು ಪಾಲ್ಗೊಳ್ಳಲಿದ್ದಾರೆ ಎಂದು ಅಖಿಲ ಭಾರತೀಯ ವನವಾಸಿ ಕಲ್ಯಾಣ್ ಆಶ್ರಮದ ಸಂಘಟನಾ ಕಾರ್ಯದರ್ಶಿ ಅತುಲ್ ಜೋಗ್ ಆಕಾಶವಾಣಿಗೆ ತಿಳಿಸಿದ್ದಾರೆ.

ಧ್ವನಿ- ಅತುಲ್ ಜೋಗ್ (೨೦ ಸೆಕೆಂಡ್ಸ್)

ಈ ಕಾರ್ಯಕ್ರಮದ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಕ್ಕಾಗಿ ಅತ್ಯುತ್ತಮ ಕೆಲಸ ಮಾಡಿದ ವಿವಿಧ ರಾಜ್ಯಗಳ ೨೫ ಯುವಕರಿಗೆ ಪ್ರಶಸ್ತಿ ನೀಡಲಾಗುವುದು. ಬುಡಕಟ್ಟು ಸಮಾಜಕ್ಕೆ ಸಂಬಂಧಿಸಿದ ಪ್ರದರ್ಶನವನ್ನು ಸಹ ಆಯೋಜಿಸಲಾಗುವುದು. ವಿವಿಧ ೧೨೦ ನೃತ್ಯ ಗುಂಪುಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಲಿವೆ

<><><><>

ರಾಜಕುಮಾರ ರಹಿಂ ಅಲ್ ಹುಸೇನ್ ಅವರನ್ನು ಅವರ ತಂದೆಯ ಸಾವಿನ ಬೆನ್ನಲ್ಲೇ ಇಸ್ಮೈಲಿ ಮುಸ್ಲಿಮರ ಆಧ್ಯಾತ್ಮಿಕ ನಾಯಕ ನೂತನ ಆಘಾಖಾನ್ ಎಂದು ನೇಮಿಸಲಾಗಿದೆ. ಆ ಮೂಲಕ ರಹಿಂ ಅಲ್ ಹುಸೇನ್, ೫೦ನೇ ತಲೆಮಾರಿನ ಇಮಾಮ್ ಆಗಿದ್ದಾರೆ. ಅವರ ತಂದೆ ೪ನೇ ಆಘಾಖಾನ್ ರಾಜಕುಮಾರ ಕರೀಂ ಅಲ್ ಹುಸ್ಸೈನಿ, ತಮ್ಮ ೮೮ನೇ ವಯಸ್ಸಿನಲ್ಲಿ ಪೋರ್ಚುಗಲ್‌ನಲ್ಲಿ ಕಳೆದ ಮಂಗಳವಾರ ನಿಧನರಾದರು. ಮೂವರು ಗಂಡು ಮಕ್ಕಳು ಹಾಗೂ ಓರ್ವ ಪುತ್ರಿಯನ್ನು ಅವರು ಅಗಲಿದ್ದಾರೆ. ರಾಜಕುಮಾರ ರಹೀಂ ಅವರ ಹಿರಿಯ ಪುತ್ರರಾಗಿದ್ದಾರೆ.

<><><><>

ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯ ಇಂದು ಮಧ್ಯಾಹ್ನ ಮಹಾರಾಷ್ಟ್ರದ ನಾಗ್ಪುರದ ವಿದರ್ಭ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ ಮಧ್ಯಾಹ್ನ ೧:೩೦ ಕ್ಕೆ ಆರಂಭವಾಗಲಿದೆ. ಭಾರತ ಇತ್ತೀಚೆಗೆ ಪ್ರವಾಸಿ ತಂಡದ ವಿರುದ್ಧದ ಐದು ಪಂದ್ಯಗಳ ಟಿ-೨೦ ಅಂತಾರಾಷ್ಟ್ರೀಯ ಸರಣಿಯಲ್ಲಿ ೪-೧ ಅಂತರದ ಭರ್ಜರಿ ಜಯ ಸಾಧಿಸಿದೆ. ಜೋಸ್ ಬಟ್ಲರ್ ನೇತೃತ್ವದ ಇಂಗ್ಲೆಂಡ್ ತಂಡ, ಟಿ-೨೦ ಸರಣಿಗೆ ಆಯ್ಕೆ ಮಾಡಿಕೊಂಡಿದ್ದ ತಂಡವನ್ನೇ ಉಳಿಸಿಕೊಂಡಿದೆ. ಭಾರತ ತಂಡಕ್ಕೆ ರೋಹಿತ್ ಶರ್ಮಾ ನಾಯಕರಾಗಿದ್ದು, ವಿರಾಟ್ ಕೊಹ್ಲಿ ತಂಡಕ್ಕೆ ಮರಳಿದ್ದಾರೆ. ಸರಣಿಗಾಗಿ ಭಾರತೀಯ ತಂಡಕ್ಕೆ ವರುಣ್ ಚಕ್ರವರ್ತಿ ಅವರನ್ನು ಕೂಡ ಸೇರಿಸಿಕೊಳ್ಳಲಾಗಿದೆ. ಭಾರತ ತಂಡ, ಭಾನುವಾರ ಕಟಕ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಎರಡನೇ ಪಂದ್ಯವನ್ನು ಆಡಲಿದ್ದು, ಮೂರನೇ ಮತ್ತು ಅಂತಿಮ ಏಕದಿನ ಪಂದ್ಯ ಈ ತಿಂಗಳ ೧೨ ರಂದು ಅಹಮದಾಬಾದ್‌ನಲ್ಲಿ ನಡೆಯಲಿದೆ.

<><><><>

ವಿಶ್ವ ಟೆಬಲ್ ಟೆನಿಸ್ ಸಿಂಗಾಪುರ್ ಸ್ಮ್ಯಾಶ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಅಗ್ರ ಪುರುಷರ ಡಬಲ್ಸ್ ಜೋಡಿ ಮಾನವ್ ಠಕ್ಕರ್ ಮತ್ತು ಮನುಶ್ ಶಾ, ೪ನೇ ಶ್ರೇಯಾಂಕಿತ ಫ್ರಾನ್ಸ್‌ನ ಫ್ಲೋರಿಯನ್ ಬೌರಾಸೌದ್ ಮತ್ತು ಎಸ್ಟೇಬ್ಯಾನ್ ಡಾರ್, ಜೋಡಿಯನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ ೩.೩೦ ಕ್ಕೆ ಆರಂಭವಾಗಲಿದೆ. ನಿನ್ನೆ ನಡೆದ ಪಂದ್ಯದಲ್ಲಿ ಹಾಂಕ್‌ಗಾಂಗ್‌ನ ವಾಂಗ್ ಚುಂಗ್ ಟಿಂಗ್ ಮತ್ತು ಇ ಕ್ವಾನ್ ತೊ, ಜೋಡಿಯನ್ನು ೩-೦ ಅಂತರದಲ್ಲಿ ಮಣಿಸಿ ಭಾರತೀಯ ಜೋಡಿ ಮುಂದಿನ ಹಂತಕ್ಕೆ ಲಗ್ಗೆ ಇಟ್ಟಿತು.

<><><><>

ಮುಂಬೈ ಓಪನ್ ಟೆನಿಸ್ ಟೂರ್ನಿಯಲ್ಲಿಂದು ಮುಂಬೈನ ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದಲ್ಲಿ ನಡೆಯಲಿರುವ, ಮಹಿಳಾ ಡಬಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ, ಭಾರತದ ಪ್ರಾರ್ಥನಾ ಥೋಂಬರೆ ಹಾಗೂ ನೆದರ್‌ಲ್ಯಾಂಡ್ಸ್‌ನ ಅರಿಯಾನ್ನೆ ಹಾರ್ಟೋನೊ ಜೋಡಿ, ಜಪಾನ್‌ನ ನವೋಹಿಬಿನೊ ಮತ್ತು ಜಾರ್ಜಿಯಾದ ಒಕ್ಸಾನಾ ಕಲಾಶ್ನಿಕೋವಾ ಜೋಡಿಯನ್ನು ಎದುರಿಸಲಿದೆ. ೧೬ರ ಮಹಿಳಾ ಸಿಂಗಲ್ಸ್ ಸುತ್ತಿನಲ್ಲಿ, ಹಲವಾರು ಭಾರತೀಯ ಆಟಗಾರ್ತಿಯರು ಇಂದು ಕಣಕ್ಕಿಳಿಯಲಿದ್ದಾರೆ. ಅಂಕಿತಾ ರೈನಾ, ಕೆನಡಾದ ರೆಬೆಕ್ಕಾ ಮರಿನೋ ಅವರನ್ನು ಎದುರಿಸಲಿದ್ದಾರೆ, ಶ್ರೀವಲ್ಲಿರಶ್ಮಿಕಾ ಭಮಿಡಿಪತಿ, ಸೆರ್ಬಿಯಾದ ಅಲೆಕ್ಸಾಂಡ್ರಾ ಕ್ರುನಿಕ್ ಮುಖಾಮುಖಿಯಾಗಲಿದ್ದಾರೆ, ಮಾಯಾ ರಾಜೇಶ್ವರನ್ ರೇವತಿ, ಕಝಾಕಿಸ್ತಾನ್‌ನ ಜರೀನಾ ದಿಯಾಸ್ ಅವರೊಂದಿಗೆ ಸ್ಪರ್ಧಿಸಲಿದ್ದಾರೆ.

<><><><>

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ, ನಿನ್ನೆ ರಾತ್ರಿ ಕೋಲ್ಕತ್ತಾದ ವಿವೇಕಾನಂದ ಯುಬಾ ಭಾರತಿ ಕ್ರಿರಂಗನ್‌ನಲ್ಲಿ ನಡೆದ ಪಂದ್ಯದಲ್ಲಿ, ಮೋಹನ್ ಬಗಾನ್ ಸೂಪರ್ ಜೈಂಟ್ ತಂಡ, ಪಂಜಾಬ್ ಎಫ್‌ಸಿಯನ್ನು ೩-೦ ಅಂತರದಿಂದ ಸೋಲಿಸಿತು. ಈ ಗೆಲುವಿನೊಂದಿಗೆ, ಮ್ಯಾರಿನರ್ಸ್, ಪ್ರಸಕ್ತ ೧೪ ಗೆಲುವುಗಳು ಮತ್ತು ನಾಲ್ಕು ಡ್ರಾಗಳ ನಂತರ, ೨೦ ಪಂದ್ಯಗಳಿಂದ ೪೬ ಅಂಕಗಳನ್ನು ಪಡೆಯುವ ಮೂಲಕ, ಈ ಋತುವಿನ ಪ್ಲೇಆಫ್‌ಗೆ ಅರ್ಹತೆ ಪಡೆದ ಮೊದಲ ತಂಡ ಎನಿಸಿಕೊಂಡಿದೆ. ಗೋವಾದ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಪಂದ್ಯದಲ್ಲಿ, ಎಫ್‌ಸಿ ಗೋವಾ, ಒಡಿಶಾ ಎಫ್‌ಸಿಯನ್ನು ಎದುರಿಸಲಿದೆ. ಪಂದ್ಯ ಸಂಜೆ ೦೭:೩೦ ಕ್ಕೆ ಪ್ರಾರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>